# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 521 |
| ಸದಸ್ಯರ ಹೆಸರು | : | ಡಾ:ಚಂದ್ರಶೇಖರ್ ಬಿ.ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಕಾರಂಜಾ ಮುಳುಗಡೆ ಸಂತ್ರಸ್ತರಿಗೆ ಭೂಮಿಗೆ ತಕ್ಕಂತೆ ಕನಿಷ್ಠ ಬೆಲೆ ನಿಗದಿ ಮಾಡಿ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ: ಭೂಮಿಯ ಬೆಲೆಗೆ ತಕ್ಕಂತೆ ಗರಿಷ್ಠ ಬೆಲೆ ನಿಗದಿ ಮಾಡಿ ಪರಿಹಾರ ನೀಡುತ್ತಿಲ್ಲದಿರುವುದಕ್ಕೆ ಕಾರಣಗಳೇನು? | ಕಾರಂಜಾ ಯೋಜನೆಯಡಿ 27 ಹಳ್ಳಿಗಳು ಭಾದಿತವಾಗಿರುತ್ತದೆ. ಈ ಯೋಜನೆಯಡಿ ಮುಳುಗಡೆ ಪ್ರದೇಶಕ್ಕಾಗಿ 15522 ಎಕರೆ 25 ಗುಂಟೆ, ಕಾಲುವೆಗಳಿಗಾಗಿ 6054 ಎಕರೆ 23 ಗುಂಟೆ, ಪುನರ್ವಸತಿ ಕೇಂದ್ರಗಳಿಗಾಗಿ 378 ಎಕರೆ 14 ಗುಂಟೆ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಂಡು ಇಲ್ಲಿಯವರೆಗೆ ರೂ.163.35 ಕೋಟಿಗಳನ್ನು ಪರಿಹಾರವನ್ನಾಗಿ ಆಯಾ ಸಾಲಿನ ಮಾರುಕಟ್ಟೆ ದರದಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಾರಂಜಾ ಯೋಜನಾ ಕಛೇರಿಯಿಂದ ಪರಿಹಾರಧನವನ್ನು ವಿತರಿಸಲಾಗಿದೆ.<br><br>ಕಾನೂನು ರೀತ್ಯಾ ಈಗಾಗಲೇ ಬಾಧಿತ ವ್ಯಕ್ತಿಗಳ ಬೇಡಿಕೆಗಳನ್ನು ಪೂರೈಸಲಾಗಿದ್ದು, ಇದು ನಿರ್ಧಾರಿತ ವಿಷಯವಾಗಿದೆಯೆಂದು ದಿ:26.01.2014 ರಂದು ಸುದೀರ್ಘ ಚರ್ಚೆಯ ನಂತರ, ಹೆಚ್ಚಿನ ಬೇಡಿಕೆಗಳನ್ನು ತಿರಸ್ಕರಿಸಲು ಅಂದಿನ ಸಚಿವ ಸಂಪುಟವು ನಿರ್ಣಯಿಸಿರುತ್ತದೆ. |

ಸಂಖ್ಯೆ:ಜಸಂಇ 122 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು